# ಬಾಳಿನ ಬೇಗುದಿಗೆ ಬೆಳದಿಂಗಳಾಗುವ ಹಾಡು

ಜೀವನದ ಜಂಜಡಗಳಿಂದ ನಾನು ಹತಾಶನಾದಾಗ, ನಿತ್ಯ ಜೀವನದಲ್ಲಿ ಉತ್ಸಾಹ ಕಳೆದುಕೊಂಡಾಗ, 'ಕೈಲಾಗದು ಎಂದು ಕೈ ಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ' ಮತ್ತು 'ಹುಟ್ಟೋದ್ಯಾಕೆ ಸಾಯೋದ್ಯಾಕೆ, ಏನಾದರೂ ಸಾಧಿಸಿ ಹೋಗೋಕೆ' ಎಂಬ ಸ್ಫೂರ್ತಿದಾಯಕ ಹಾಡುಗಳನ್ನು ಪದೇ ಪದೇ ಕೇಳುತ್ತಾ ಎದೆಗುದಿಗಳಿಗೆ ಮದ್ದನ್ನರೆಯುತ್ತೇನೆ.

'ಬಂಗಾರದ ಮನುಷ್ಯ' ಹಾಗೂ 'ಶಾಂತಿ ಕ್ರಾಂತಿ' ಸಿನಿಮಾಗಳ ಗೀತೆಗಳನ್ನು ಲೆಕ್ಕವಿರದಷ್ಟು ಸಾರಿ ಕೇಳಿರುವೆ. ಈ ನರ ಜನ್ಮದಲ್ಲಿ ಏನಾದರೂ ಸಾಧಿಸಿ ಹೋಗುವ ಛಲ– ಬಲಗಳು ಮನಸ್ಸಿನಾಳದಲ್ಲಿ ತಂತಾನೆ ಕುಡಿಯೊಡೆಯುತ್ತವೆ. ಅಂಥದ್ದೊಂದು ಮಾಂತ್ರಿಕ ಶಕ್ತಿಯನ್ನು ನಾನು ಈ ಹಾಡುಗಳಲ್ಲಿ ಕಂಡುಕೊಂಡಿದ್ದೇನೆ. ವಿಶೇಷವಾಗಿ ರಾಜ್ ಕುಮಾರ್ ಅವರ ಕಂಚಿನ ಕಂಠದಲ್ಲಿ ಮೂಡಿಬಂದಿರುವ ಹಾಡುಗಳು ನನಗೆ ಅಚ್ಚುಮೆಚ್ಚು. ಹಂಸಲೇಖ ಅವರ ಹಾಡುಗಳು ಎಂದೆಂದಿಗೂ ಬಾಡದ ಸುಮಗಳಂತೆ.

ಪಿ.ಬಿ. ಶ್ರೀನಿವಾಸ್, ಎಸ್.ಪಿ. ಬಾಲಸುಬ್ರಹ್ಮಣ್ಯಂ ಮತ್ತು ಎಸ್. ಜಾನಕಿ ಅವರ ಎಂದೂ ಮರೆಯದ ಹಾಡುಗಳನ್ನು ಗುನುಗುವುದರಲ್ಲಿಯೇ ಸಗ್ಗದ ಸಿರಿ ಪಡೆದೆ.

'ನನ್ನ ನಿನ್ನ ಆಸೆ; ನಮ್ಮ ಪ್ರೇಮ ಭಾಷೆ', 'ಯಾರಿವಳು ಯಾರಿವಳು ಸೂಜಿಮಲ್ಲಿ ಕಣ್ಣವಳು', 'ಜೊತೆಯಾಗಿ, ಹಿತವಾಗಿ' ಮುಂತಾದ ತೊಂಬತ್ತರ ದಶಕದ ಪ್ರೇಮಗೀತೆಗಳನ್ನು ಕೇಳುತ್ತಿದ್ದರೆ ಕೈ ಕಾಲುಗಳು ತಮ್ಮಷ್ಟಕ್ಕೆ ತಾವೇ ಕುಂತಲ್ಲೆ ಕುಣಿಯುತ್ತವೆ! ಇಷ್ಟದ ಹಾಡುಗಳನ್ನು ಹೃದಯ ತುಂಬಿಕೊಳ್ಳುವುದೇ ಸುಂದರ ಅನುಭೂತಿ.

—ವೀರೇಶ ಬ. ಕುರಿ ಸೋಂಪೂರ

## ಹಾಡೆಂಬ ಸಂಜೀವಿನಿ

90ರ ದಶಕದಲ್ಲಿ ಖಾಸಗಿ ಬಸ್‌ನಲ್ಲಿ ಮುಂಬೈಗೆ ಹೊರಟಿದ್ದೆ. ಪಕ್ಕ ಕುಳಿತಿದ್ದ ಮಹಿಳೆ ನನ್ನ ಪರಿಚಯ ಕೇಳಿದರು. 'ನೀವು?' ಎಂದು ಕೇಳಿದೆ. ತಕ್ಷಣವೇ ಅವರ ಚೀಲದಿಂದ ಪುಟ್ಟ ಹ್ಯಾಂಡಿ ಕ್ಯಾಸೆಟ್ ಟೇಪ್ ರೆಕಾರ್ಡರ್‌ನ ಹೆಡ್‌ಫೋನ್ ನನ್ನ ಕಿವಿಗೆ ಹಾಕಿ ಪ್ಲೇ ಮಾಡಿದರು. 'ಕೋಡಗನ ಕೋಳಿ ನುಂಗಿತ್ತಾ ತಂಗಿ...' ಹಾಡು. ಗಾಯಕ ಶಿವಮೊಗ್ಗ ಸುಬ್ಬಣ್ಣ ಎಂದೆ. 'ಅವರ ತಂಗಿ ನಾನು, ಶಿಕ್ಷಕಿ' ಎಂದು ಹಾಡಿನ ಮೂಲಕ ವಿಶೇಷವಾಗಿ ಪರಿಚಯಿಸಿಕೊಂಡರು.

ಆ ಕಾಲದಲ್ಲಿ ಸಂತ ಶಿಶುನಾಳ ಷರೀಫರ ಹಾಡುಗಳು ಸುಬ್ಬಣ್ಣರ ಕಂಠಸಿರಿಯಲ್ಲಿ ಸೂಪರ್ ಹಿಟ್ ಆಗಿತ್ತು. ನಮ್ಮ ಅತ್ತೆ ಮನೆಯ ಹಿತ್ತಲ ಮರಗಳಿಂದ ತೆಂಗಿನಕಾಯಿ ತೆಗೆಸಿದಾಗ ನಾನೇ ಸಿಪ್ಪೆ ಬಿಡಿಸಿ ಸುಲಿದು ಕೊಡುತ್ತೇನೆ ಇಂದಿಗೂ. ಒಂದು ಗಂಟೆ ಅವಧಿಯಲ್ಲಿ ನನ್ನ ಈ ಕೆಲಸದ ಸ್ಫೂರ್ತಿಗೆ ನನ್ನ ಮೊಬೈಲ್‌ನಲ್ಲಿ ಪ್ರಥಮ ತಹಃ ಜೋಗ್ (ನಾಟ) ರಾಗದ 'ಮಹಾ ಗಣಪತಿಂ ಮನಸಾ ಸ್ಮರಾಮಿ...', ನಂತರ ರೇವತಿ ರಾಗದ 'ಶಂಭೋ ಶಿವ ಶಂಭೋ...', ಹಂಸಾನಂದಿ ರಾಗದ 'ಒಬ್ಬನೇ ಒಬ್ಬನೇ ಮಂಜುನಾಥನೊಬ್ಬನೇ...' ಭಕ್ತಿಗೀತೆಗಳ ನಂತರ ಕನ್ನಡ ಸಿನಿಮಾ ಹಾಡುಗಳನ್ನು ಕೇಳುತ್ತಲೇ ಇನ್ನೂ ಅರ್ಧ ಗಂಟೆ ಹೆಚ್ಚು ಕಾಯಿ ಬಿಡಿಸಿ ಹಾಕುತ್ತಿದ್ದೆ!.

90ರ ದಶಕದಲ್ಲಿ ಕ್ಯಾಸೆಟ್ ಟೇಪ್ ರೆಕಾರ್ಡರ್ ಕಾಲ, ಮನೆ ಎದುರಿನ ಅಂಗಡಿಯ ಸಖಾರಾಮರು ಕ್ಯಾಸೆಟ್ ಅಂಗಡಿಯಲ್ಲಿ ಹಾಡುಗಳನ್ನು ಸ್ಪೀಕರ್‌ಗಳಲ್ಲಿ ಕನೆಕ್ಟ್ ಮಾಡಿ ಹಾಕುತ್ತಿದ್ದರು. ಅವರಿಗೆ ಒಮ್ಮೆ ನಾನು ಕೆಲ ಹಾಡುಗಳನ್ನು ತಿಳಿಸಿ ರೆಕಾರ್ಡ್ ಮಾಡಿ ಕೊಡಲು ಕೋರಿದ್ದೆ. ಅವರು ಅದನ್ನು ರೆಕಾರ್ಡ್ ಮಾಡಿ ತಮ್ಮ ಮುಖ್ಯ ರಸ್ತೆಯ ಅಂಗಡಿಯಲ್ಲಿ ಪ್ಲೇ ಮಾಡಿ, ಗ್ರಾಹಕರು ಬಂದು 'ಇವೇ ಹಾಡುಗಳ ಕ್ಯಾಸೆಟ್ ಬೇಕು' ಎಂದು ಹಲವರು ಕೊಂಡಿದ್ದೂ ಇದೆ!. ನಾನು ಸಂಗೀತಾಭ್ಯಾಸ ಮಾಡದಿದ್ದರೂ ಕೆಲ ಹಾಡುಗಳ ರಾಗಗಳ ಜಾಡನ್ನು ಹಿಡಿದು ಸಂಗೀತದಲ್ಲಿ ಪರಿಣತಿ ಪಡೆದ ನನ್ನ ಶಡ್ಡಕರ ಬಳಿ ವಿಚಾರಿಸುತ್ತಿದ್ದೆ!.

ದೈನಂದಿನ ಬದುಕಿನಲ್ಲಿ ಕೆಲಸದ ಒತ್ತಡ, ಪ್ರಯಾಣ ಮುಂತಾದೆಡೆ ಹಾಡು ಹಾಸುಹೊಕ್ಕಾಗಿದೆ. ಹೋಟೆಲ್‌ಗೆ ಹೋದಾಗ ಅಲ್ಲಿ ಮೇಲುದನಿಯಲ್ಲಿ ಹಾಡಿದ ಹಾಡು ಮುದ ನೀಡಿದರೆ ನಮ್ಮ ಉಪಾಹಾರ ಮುಗಿದರೂ ಹಾಡು ಪೂರ್ಣ ಆಲಿಸಿಯೇಬರುವೆನು! ಹಾಡು ಒಂದು ಸಂಜೀವಿನಿಯೇ ಸರಿ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ



## ತೇರೇ ಬಿನಾ ಜಿಂದಗೀ ಸೆ ಕೋಯಿ

ಹಾಡಿನ ಗುಂಗು ಇಂದು ನಿನ್ನೆಯದಲ್ಲ. ಏಳೆಂಟು ವರ್ಷದವಳಿದ್ದಾಗ 'ಓಡುವ ನದಿ ಸಾಗರವ ಸೇರಲೇಬೇಕು' ಹಾಡನ್ನು ಕೇಳುವಾಗ ನನ್ನನ್ನು ಸೆಳೆದದ್ದು 'ದೂರಬೆಟ್ಟದಲ್ಲಿ ಪುಟ್ಟ ಮನೆಯಿರಬೇಕು ಮನೆಯ ಸುತ್ತ ಹೂವ ರಾಶಿ ಹಾಸಿರಬೇಕು' ಸಾಲುಗಳು. ನನ್ನದೇ ಆದ ಕಲ್ಪನಾಲೋಕಕ್ಕೆ ಜಾರುವ ಅನುಭೂತಿ ನೀಡಿತ್ತು! ರೇಡಿಯೊ ಜೊತೆ ಹಾಡಿಕೊಂಡೇ ಬೆಳೆದವಳು ನಾನು.

ನಂತರದ ದಿನಗಳಲ್ಲಿ ಹಿಂದೀ ಹಾಡುಗಳ ಆಕರ್ಷಣೆ ಪೂರ್ತಿ ಅರ್ಥವಾಗದಿದ್ದರೂ ಕ್ರಮೇಣ ಕೆಲವು ಹಿತ, ಮುದಗೊಳಿಸುವ ಹಾಡುಗಳನ್ನು ಆಯ್ಕೆ ಮಾಡುವ ಮಟ್ಟಕ್ಕೆ ಮನಸ್ಸು ತಿಳಿಯಾಗಿತ್ತು. ಸಾವಿರಾರು ಹಾಡುಗಳು ಇಷ್ಟ ಎನ್ನಿಸಿದರೂ ಅತಿಯಾಗಿ ಕಾಡುವ ಹಾಡು ಎಂದರೆ 'ಆಂಧಿ' ಚಿತ್ರದ 'ತೇರೇ ಬಿನಾ ಜಿಂದಗೀ ಸೆ ಕೋಯಿ'– ಗುಲ್ಜಾರ್, ಆರ್. ಡಿ. ಬರ್ಮನ್, ಲತಾ– ಕಿಶೋರ್ ಈ ಹಾಡಿಗೆ ಮನಸೋಲದವರಾರು!

ಮಾಗಿದ ಮನಸ್ಸುಗಳ ಸಂವಹನ – ಗತವನ್ನು ನೆನೆಯುತ್ತ ಪಶ್ಚಾತ್ತಾಪದ ಬೇಗೆಯಲ್ಲಿ ಸರಿಹೋಗಬಾರದೇ ಎಂಬ ಕಾಣದ ಅರಿಕೆ– ಮೌನವೇ ಮಾತಾಗುವ ಅಮೂಲ್ಯ ಕ್ಷಣಗಳು!

ಈ ಹಾಡು ಗುನುಗುವಾಗ ಭಾವನಾಲೋಕದಲ್ಲಿ ವಿಹರಿಸಿ, ಕಣ್ತುಂಬುತ್ತದೆ. ಬೇಸರವಾದಾಗ ಮನಸ್ಸು ಶಾಂತವಾಗುತ್ತದೆ. ಪ್ರಫುಲ್ಲವಾಗಿದ್ದರೆ ಇನ್ನಷ್ಟು ಉಲ್ಲಾಸಿತಗೊಳಿಸುವ ಸಾಮರ್ಥ್ಯ ಈ ಹಾಡಿನದು!

ಈಗಲೂ ಸ್ಪರ್ಧೆಗಳಲ್ಲಿ ಇದನ್ನೇ ಹಾಡಿ ಬಹುಮಾನಗಳನ್ನು ಗಳಿಸಿರುವೆ. ಅತಿಯಾಗಿ ಗುನುಗುವ ಈ ಹಾಡು ನನ್ನ 'ಟ್ರಂಪ್ ಕಾರ್ಡ್' ಕೂಡ ಹೌದು.

—ಕೆ.ವಿ. ರಾಜಲಕ್ಷ್ಮಿ, ಬೆಂಗಳೂರು

ನಿಮ್ಮ ಬದುಕಿನಲ್ಲಿಯೂ ಹಾಡುತ್ತ, ಹಾಡು ಕೇಳುತ್ತ, ಹಾಡು ಗುನುಗುತ್ತ ಬದುಕು ಸಹನೀಯವೆನಿಸಿರಬಹುದು. ಸಂಭ್ರಮಿಸಿರಬಹುದು. ಸಂಕಟಪಡುವಾಗಲೂ ಇದು ನನ್ನೊಬ್ಬನದೇ ಸಂಕಟವಲ್ಲ ಎಂಬಂತೆ ಸಮಾಧಾನವನ್ನೂ ಮಾಡಿಕೊಂಡಿರಬಹುದು. ಹಾಡಿನೊಂದಿಗೆ ನಿಮ್ಮ ಸಾಂಗತ್ಯವನ್ನು ನೀವೂ ಹಂಚಿಕೊಳ್ಳಬಹುದಲ್ಲ. ಹೀಗೆ ಕಾಡುವ ಹಾಡು, ಕಾಡಿದ ಪಾಡನ್ನು ಸಹನೀಯವಾಗಿಸಿದ್ದರೆ, ನೀವೂ ಬರೆದುಕಳುಹಿಸಿ. ನೂರೈವತ್ತು ಪದಮಿತಿಯಲ್ಲಿ. ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಲೇಖನವಿರಲಿ. editorsu@sudha.co.inಗೆ ಮೇಲ್ ಮಾಡಿ.